SRI D. K. NAIKER—The building materials will be released after the grant is obtained from the Divisional Commissioner. The Divisional Commissioner has been addressed in this matter and it will be done very soon.

Petition by villagers of Bargaon about scarcity of drinking water Presentation

SRI J. S. AMMANNAVAR (Sadalga)—I beg to present a petition signed by the villagers of Bargaon, Taluk Chikodi, District Belgaum, regarding scarcity of drinking water.

MADAM SPEAKER—This petition is presented.

Message from the Chairman L.C. Announcement

MADAM SPEAKER—I have received a message from the Chairman, Legislative Council saying that the following Bills have been agreed to by the Council without any amendments or recommendations

1. The Mysore prevention of Cow Slaughter and Cattle Preservation (Amendment) Bill 1973.
2. The Mysore Seed Farms Bill, 1973.
3. The Mysore Prevention of Animal Sacrifices (Amendment) Bill, 1973.
4. The Karnataka Appropriation (No. 2) Bill, 1975.

Removal of Age old huts at Bommapura near Hubli

† ಶ್ರೀ ಎಸ್. ಬಂಗಾರಪ್ಪ (ಸೊರಬ)—ಮಾನ್ಯ ಅಧ್ಯಕ್ಷರೆ, ನಾನು ಹುಬ್ಬಳ್ಳಿ ನಗರದ ಮಧ್ಯಭಾಗದಲ್ಲಿರತಕ್ಕ ಬೊಮ್ಮಾಪುರ ಒಣಿಯಲ್ಲಿ ವಾಸಮಾಡತಕ್ಕ ಅನೇಕ ಹರಿಜನರ ಕುಟುಂಬದ ಬಗ್ಗೆ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೆ. ಅದು ಇವೊತ್ತಿನ ಪತ್ರಿಕೆಗಳಲ್ಲಿ ಬಹಳ ವಿವರವಾಗಿ ಬಂದಿದೆ. ಆ ಒಂದು ಜಾಗದಲ್ಲಿ ಶತಮಾನಗಳಿಂದ ವಾಸಮಾಡುತ್ತಿದ್ದಂಥ ಜನ ಅವರು. ಅಲ್ಲಿ ಹರಿಜನರ ಗುಡಿಸಲನ್ನು ನೆಲಸಮ ಮಾಡತಕ್ಕ ಸಂದರ್ಭದಲ್ಲಿ ಪೋಲೀಸಿನವರು ಹೋದರೂ ಕೂಡ, ಅವರ ಎದುರಿನಲ್ಲೇ ಹರಿಜನ ಹೆಣ್ಣು ಮಕ್ಕಳನ್ನು ಹೊಡೆಸಿದ್ದಾರೆ.

ಅಧ್ಯಕ್ಷರು—ಮಾನ್ಯ ಮುಖ್ಯ ಮಂತ್ರಿಗಳು ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ—ಆದರ ಬಗ್ಗೆ ನಾಳೆ ಹೇಳಿಕೆ ಕೊಡಲಿ, ಈಗ ಅಲ್ಲಿ ಏನಾಗಿದೆ ಎಂದರೆ ಪೋಲೀಸಿನವರಿಗೆ ದೂರು ಕೊಟ್ಟರು ಅವರು ದೂರು ತೆಗೆದುಕೊಳ್ಳುತ್ತಾ ಇಲ್ಲ, ಈಗ ಪೋಲಿಸಿನವರ ಎದುರಿನಲ್ಲೇ ಹೊಡೆದಿರುವುದು ಇವೆ. ಹರಿಜನರು ದೂರು ಕೊಟ್ಟರೆ ಪೋಲೀಸಿನವರು ಎದುರಿನಲ್ಲೇ ಹೊಡೆದಿದ್ದಾರೆ ಹಲ್ಲು ಮುರಿದು ಹೋಗಿದೆ. ಇಷ್ಟಾದರೂ ಕೂಡ ಗಮನ ಕೊಟ್ಟಿರುವುದಿಲ್ಲ ಅಲ್ಲಿ ಕಂಟ್ರಾಕ್ಟರು ಕೆಲವು ಮನೆಗಳನ್ನು ಕೀಳಿಸಿ ಅಲ್ಲಿ ಎಲ್ಲಾ ಮಂದ ದಿಮ್ಮಿಗಳನ್ನು ತಂದು ಹಾಕಿಸಿದ್ದಾರೆ, ಇಲ್ಲಿ ಜಾಗದ ಓನರ್ ಯಾರು ಇದ್ದಾರೆ ಅವರಿಗೆ ಈ ಪೋಲೀಸಿನವರು ಬೆಂಬಲ ಕೊಡುತ್ತಿದ್ದಾರೆ ಆದುದ್ದರಿಂದ ಇವೊತ್ತು ಅಲ್ಲಿಯ ಹರಿಜನರಿಗೆ ರಕ್ಷಣೆ ಕೊಡುವುದನ್ನು ತಿಳಿಸಬೇಕು, ಅಲ್ಲದೆ ಅವರು ಏನು ದೂರು ಕೊಡುತ್ತಾರೆ ಅದನ್ನು ತೆಗೆದುಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್—ನಾನು ನೋಟ್ ಮಾಡಿಕೊಂಡಿದ್ದೇನೆ.